ಬಹಳ ದಿವಸಗಳಿಂದ ತಮ್ಮ ಬೇಡಿಕೆಯನ್ನಿಟ್ಟು ಸತ್ಯಾಗ್ರಹ ಮಾಡುತ್ತಿದ್ದಾರೆ, ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ. ಆದಷ್ಟು ಬೇಗ ಅವರ ಪ್ರಮುಖರನ್ನು ಕರೆಸಿ ಅವರ ಬೇಡಿಕೆಗಳಿಗೆ ಸ್ಪಂದನ ಮಾಡುವ ರೀತಿಯಲ್ಲಿ ಮಾತುಕತೆ ಮಾಡಿ ಅವರ ಸಮಸ್ಯೆಗೆ ಸ್ಪಂದಿಸುತ್ತೇವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತೇನೆ.

(2) **ವಿಷಯ** : ಹಳೆಯ ಮದ್ರಾಸ್ ರೋಡ್‌ನಲ್ಲಿ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.

†**ಶ್ರೀ ಐವಾನ್ ನಿಗ್ಲಿ** (ನಾಮ ನಿರ್ದೇಶಿತರು): ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. Old Madras Road ನಲ್ಲಿ ಪ್ರಯಾಣಿಕರಿಗೆ ಆಗುವ ತೊಂದರೆಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ. Old Madras Road ನಲ್ಲಿ ಒಂದು bottleneck ಇದೆ. ಬಿನ್ನಮಂಗಲ ರೈಲ್ವೆ ಅಂಡರ್‌ಪಾಸ್‌ನಲ್ಲಿ ಒಂದು bottleneck ಇರುವುದರಿಂದ, ಅಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರಿಗೆ ತುಂಬಾ ಇಕ್ಕಟ್ಟಾಗಿದೆ. Old Madras Road ನಿಂದ ಇಂದಿರಾ ನಗರ ಬಂದು ಸೇರುವುದಕ್ಕೆ ಸುಮಾರು ಎರಡು ತಾಸು ಬೇಕಾಗಿದೆ. ಇದರಿಂದ, petrol, diesel, national waste ಆಗುತ್ತಿದೆ. People who are travelling through Old Madras Road are having lot of problems. ಹೋದ ವರ್ಷ ಕೂಡ ನಾನು ಇದೇ ಜಾಗದಲ್ಲಿ ಕುಳಿತುಕೊಂಡು ಮಾತನಾಡಿದೆ. ಅದಕ್ಕೆ ಸರ್ಕಾರ ಹೋದ ವರ್ಷ ಉತ್ತರ ಕೊಟ್ಟಿದೆ. ಏನೆಂದರೆ, Central Government ಗೆ ನಾವು ಪತ್ರ ಬರೆದಿದ್ದೇವೆ, ಅದಕ್ಕೆ ನಮಗೆ ಇನ್ನೂ ಉತ್ತರ ಸಿಕ್ಕಿಲ್ಲವೆಂದು ಹೇಳಿದರು. ರೈಲ್ವೆ ಅಂಡರ್ ಬ್ರಿಡ್ಜ್ ವೈಡನಿಂಗ್ ಮಾಡುವುದಕ್ಕೆ ಒಂದು ವರ್ಷ ಬೇಕೇ ?

ಅಧ್ಯಕ್ಷರು:– **ಆಯಿತು ಬಿಡಿ. ಸರ್ಕಾರದ ಪರವಾಗಿ ಯಾರು ಉತ್ತರ ಹೇಳುತ್ತೀರಿ** ?

ಶ್ರೀ ಐವಾನ್ ನಿಗ್ಲಿ:– ಮಾನ್ಯ ಅಧ್ಯಕ್ಷರೆ, ಇನ್ನೂ ನನ್ನ ಮಾತನ್ನು ಮುಗಿಸಿಲ್ಲ. DRDO ಯಿಂದ Old Madras Road ನಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದೆ ಮತ್ತೆ ಅಲ್ಲಿಂದ ಸ್ವಲ್ಪ ಮುಂದೆ ಬಂದಾಗ NGEF ಹತ್ತಿರ ಟ್ರಾಫಿಕ್ ಜಾಮ್ ಆಗುತ್ತಿದೆ. ಮತ್ತೆ ಅಲ್ಲಿಂದ ಮುಂದೆ ಬಂದಾಗ Old Madras Road ಗೆ ಕನೆಕ್ಟ್ ಆಗುವ ಚಿರಂಜನ್‌ದಾಸ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದೆ. ಈ ಟ್ರಾಫಿಕ್ ಜಾಮ್ ಕಡಿಮೆ ಮಾಡುವುದಕ್ಕೋಸ್ಕರ ಏನು ಮಾಡಬೇಕೆಂಬುದರ ಬಗ್ಗೆ ನಾನು ಕೆಲವು ಸಲಹೆಗಳನ್ನು ಬರೆದುಕೊಂಡು ಬಂದಿದ್ದೇನೆ.

ಅಧ್ಯಕ್ಷರು:– ಅವರ ಪ್ರಶ್ನೆಗೆ ಯಾರಾದರೂ ಸಚಿವರು ಉತ್ತರ ಕೊಡಬೇಕು.

ಶ್ರೀ ಐವಾನ್ ನಿಗ್ಲಿ:– ಮೊಟ್ಟಮೊದಲಿಗೆ old madras Road ನಲ್ಲಿ ಬಿನ್ನಮಂಗಲ ಹತ್ತಿರ ಇರುವ ರೈಲ್ವೆ ಬ್ರಿಡ್ಜ್‌ನ್ನು ವೈಡನಿಂಗ್ ಮಾಡಬೇಕು. ಎರಡನೆಯದಾಗಿ ಹೊಸಕೋಟೆಯಿಂದ ಇಂದಿರಾನಗರಕ್ಕೆ.....

ಅಧ್ಯಕ್ಷರು :– ಯಾವ ವಿಷಯದ ಬಗ್ಗೆ ಮಾತನಾಡಬೇಕೆಂದು ತಾವು ಮೊದಲು ಬರೆದು ಕಳುಹಿಸಿಕೊಟ್ಟಿದ್ದೀರಾ? ಸುಮ್ಮನೆ ಬಂದು ಏನೋ ಕತೆ ಹೇಳುವ ಹಾಗೆ ಹೇಳುತ್ತಾ ಹೋದರೆ ಹೇಗೆ?

ಶ್ರೀ ಐವಾನ್ ನಿಗ್ಲಿ :– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಬರೆದುಕೊಟ್ಟಿದ್ದೇನೆ. Airport Road ನಿಂದ ಹೊಸಕೋಟೆ ಕಡೆಗೆ ಹೋಗುವ ಚಿರಂಜನ್ ದಾಸ್ ರಸ್ತೆಗೆ NGEF ಹತ್ತಿರ ಒಂದು ಅಂಡರ್‌ಪಾಸ್ ವ್ಯವಸ್ಥೆ ಮಾಡಬೇಕು. ಮತ್ತೆ DRDO ನಿಂದ Old Madras road ಗೆ one way traffic ಮಾಡಬೇಕು. ಮತ್ತೆ ಇಂದಿರಾನಗರದಿಂದ Old Madras road ಗೆ ಬರುವ ದಾರಿಗೆ ಒಂದು ಅಂಡರ್‌ಪಾಸ್ ಮಾಡಬೇಕೆಂದು ಕೇಳುತ್ತಿದ್ದೇನೆ. ಮತ್ತೆ ಆ ರಸ್ತೆಯನ್ನು ವೈಡನಿಂಗ್ ಮಾಡಿ ಅಂಡರ್ ಪಾಸ್ ಗೆ ಬ್ರಿಡ್ಜ್ ಮಾಡಬೇಕಾಗುತ್ತದೆ..

ಶ್ರೀ ಎಂ.ಪಿ. ಪ್ರಕಾಶ್ : (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಾರಿಗೆ ಸಚಿವರು ತಮ್ಮ ಅಪ್ಪಣೆಯನ್ನು ಪಡೆದು ಕೆಆರ್‌ಎಸ್ ನಲ್ಲಿ ಭಾಗೀನ ಕೊಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಆದ್ದರಿಂದ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರಿಂದ ನಾಳೆ ದಿವಸ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ ಐವಾನ್ ನಿಗ್ಲಿಯವರು ಪ್ರಸ್ತಾಪ ಮಾಡಿರುವ ವಿಷಯ ಏನೆಂದರೆ, Old Madras Road ತುಂಬಾ ಇಕ್ಕಟ್ಟಾಗಿರುವುದರಿಂದ ಟ್ರಾಫಿಕ್ ಜಾಮ್ ಜಾಸ್ತಿಯಾಗುತ್ತಿದೆ. ಸದರಿ ರಸ್ತೆಯನ್ನು ವೈಡನಿಂಗ್ ಮಾಡಬೇಕೆಂಬುದು ಅವರ ಪ್ರಶ್ನೆಯಾಗಿದೆ.

ಅಧ್ಯಕ್ಷರು :– ಮಾನ್ಯ ವೈಜನಾಥ್ ಪಾಟೀಲ್ ರವರೆ ತಾವು ಮಾತನಾಡಿ.

(3) ವಿಷಯ :– "ಆನುದೇವ ಹೊರಗಣವನು" ಪುಸ್ತಕವನ್ನು ಮುಟ್ಟುಗೋಲು ಹಾಕುವ ಬಗ್ಗೆ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) :– ಮಾನ್ಯ ಅಧ್ಯಕ್ಷರೆ, ಬಸವಣ್ಣನವರ ಬಗ್ಗೆ ಪ್ರಕಟವಾಗಿರುವ ವಿವಾದಾತ್ಮಕ ಪುಸ್ತಕವನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಬಹಳಷ್ಟು ಮಂದಿಯಿಂದ ಬೇಡಿಕೆ ಬಂದಿದೆ. ಇದರ ಬಗ್ಗೆ ಎರಡು ದಿವಸಗಳಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಆದರೆ, ಇದುವರೆವಿಗೂ ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ. ಇವತ್ತಿನ ದಿವಸ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಗುಲ್ಬರ್ಗದಲ್ಲಿ ಆಚರಣೆ ಮಾಡುತ್ತಿದ್ದಾರೆ, ಆದ್ದರಿಂದ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.